ಕಥೆ

# ಚೌಕಟ್ಟು ಮುರಿದು




**ಜೆ.ಆರ್. ರವಿಕುಮಾರ್**

ಕಲೆ: ಮುರಳೀಧರ್ ರಾಥೋಡ್


ಪ್ರತಿಜ್ಞೆಯಂತಿದ್ದ ರಾಧಾಳ ಈ ಮಾತು ರಂಗನಾಥನಿಗೆ ಆಶ್ಚರ್ಯ ಉಂಟು ಮಾಡಲಿಲ್ಲ. ಈ ಹಿಂದೆಯೂ ನಾಲ್ಕೈದು ಬಾರಿ ಅವಳು ಇದೇ ಮಾತನ್ನು ಆಡಿದ್ದಳು. ಆದರೆ ಈ ಬಾರಿ ಅವಳ ಮಾತಿನಲ್ಲಿ ದೃಢ ನಿಶ್ಚಯದ ಛಾಯೆ ಕಂಡಿತು. ಅವನು ತನ್ನ ಮನಸ್ಸಿನಲ್ಲೇ ಹೀಗೆಂದುಕೊಂಡ.

'ಇವಳೇಕೆ ಹೀಗೆ ಯೋಚನೆ ಮಾಡುತ್ತಾಳೆ. ಅಷ್ಟಕ್ಕೂ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ಸಂಸ್ಕಾರ, ಸಂಪ್ರದಾಯದ ಚೌಕಟ್ಟನ್ನು ಮೀರಿ ಬದುಕಬೇಕೆಂಬ ಆಲೋಚನೆ ತಾನೇ ಏಕೆ ಬಂತು? ಅದಕ್ಕೆ ಕಾರಣ ಏನಾದರೂ ಇದೆಯಾ? ಹಣೆಗೆ ಕುಂಕುಮ ಇಡದ, ಕೈಗಳಿಗೆ ಬಳೆಗಳನ್ನು ಧರಿಸದ, ಸೀರೆಗಿಂತ ಜೀನ್ಸ್ ಪ್ಯಾಂಟ್, ಟಾಪನ್ನೇ ಹೆಚ್ಚಾಗಿ ಹಾಕಿಕೊಳ್ಳುವ, ಎಲ್ಲರೊಂದಿಗೂ ಮುಕ್ತವಾಗಿ ಬೆರೆಯುವ ಇವಳು ತನ್ನ ಸಮಾಜದ ವಿರುದ್ಧವೇ ಬಂಡಾಯವೇನಾದರೂ ಎದ್ದಳೆ?'

'ಅವತ್ತು 'ಹೆಣ್ಣಿಗೆ ಸೀರೆಯೇ ಲಕ್ಷಣ' ಎಂದು ಹೇಳಿದ್ದಕ್ಕೆ ಅವಳು 'ಯಾಕೆ ನಿಮಗೆ ಸುಲಭ ಆಗುತ್ತೆ ಅಂತಾನ' ಎಂದುಬಿಟ್ಟಿದ್ದಳು.

'ಅಂದಿನಿಂದ ಸೀರೆಯ ವಿಷಯವನ್ನೇ ಬಿಟ್ಟೆ'

'ಏಯ್, ಏನಾದ್ರು ಮಾತಾಡು'

ಅವಳ ಮಾತು ಇನ್ನೂ ಬೆಳೆಯಬಹುದಾಗಿದ್ದ ರಂಗನಾಥನ ಯೋಚನಾ ಸರಣಿಯನ್ನು ತುಂಡರಿಸಿತು. ವಾಸ್ತವಕ್ಕೆ ಬಂದವನೇ ಕೇಳಿದ. 'ನೀನೇನಾದ್ರು ನಿನ್ನ ಜಾತಿಯ ವಿರುದ್ಧ ಬಂಡಾಯ ಎದ್ದಿದ್ದೀಯಾ?' ಅದಕ್ಕೆ ನಸುನಕ್ಕ ಅವಳು, 'ಬಂಡಾಯನೂ ಇಲ್ಲ, ಗಿಂಡಾಯನೂ ಇಲ್ಲ. ಇದು ನನ್ನ ಸ್ವಯಂ ನಿರ್ಧಾರ. ನನ್ನ ಬದುಕು ನನ್ನ ಹಕ್ಕು. ಒಬ್ಬ ಮನುಷ್ಯನನ್ನು ಜಾತಿಯಿಂದ ಗುರ್ತಿಸೋದು ಹೇಗೆ ನನಗೆ ಆಗಿ ಬರೋದಿಲ್ವೋ ಹಾಗೆ, ಯಾವುದೇ ಸಮಾಜದ ಕಂದಾಚಾರಗಳು, ಸಂಪ್ರದಾಯ ಇಷ್ಟವಾಗೋದಿಲ್ಲ. ಹೀಗೇ ಬದುಕಬೇಕೆಂದು ನಿರ್ಬಂಧ ಹೇರುವುದರ ವಿರೋಧಿ ನಾನು' ಎನ್ನುತ್ತ ಸ್ಟೌವ್ ಹತ್ತಿಸಿ ಕುಕ್ಕರಿನಲ್ಲಿ ಅನ್ನಕ್ಕಿಟ್ಟಳು.